ಓ ಎಸ್ ನಂ. 101/2016 ಪಿಡಬ್ಲ್ಯೂ : 1

ಈ ಸಾಕ್ಷಿಯನ್ನು ದಿನಾಂಕ : 11.11.2016 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ः ವಾದಿ ಪರ ವಕೀಲರಿಂದ

ಈ ದಿನ ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸಿದ್ದು, ಅದರಲ್ಲಿರುವ ಸಂಗತಿಗಳು ಸತ್ಯವಾಗಿರುತ್ತವೆ ಎಂದು ಪ್ರಮಾಣೀಕರಿಸುತ್ತೇನೆ.

ದಾವಾ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಅಡಂಗಲ್‌ನ ಧೃಡೀಕೃತ ನಕಲು ನಿಪಿ-1 ಎಂದು, ಆರ್‌ಎಸ್‌ಆರ್ ಧೃಡೀಕೃತ ನಕಲು ನಿಪಿ-2 ಎಂದು, ದಾವಾ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಆರ್‌ಟಿಸಿ ನಿಪಿ-3 ಎಂದು, ದಿನಾಂಕ 18.07.2005 ರಂದು ಆದಂತಹ ನೋಂದಾಯಿತ ಕ್ರಯಪತ್ರದ ಧೃಡೀಕೃತ ನಕಲು ನಿಪಿ-4 ಎಂದು, ದಿನಾಂಕ 12.05.2008 ರಂದು ಆದಂತಹ ನೋಂದಾಯಿತ ಶುದ್ಧ ಕ್ರಯಪತ್ರದ ಧೃಡೀಕೃತ ನಕಲು ನಿಪಿ-5 ಎಂದು, ದಿನಾಂಕ 21.05.2012 ರಂದು ಆದಂತಹ ನೋಂದಾಯಿತ ಹಕ್ಕು ಬಿಡುಗಡೆ ಪತ್ರದ ಧೃಡೀಕೃತ ನಕಲು ನಿಪಿ-6 ಎಂದು, ತಹಶೀಲ್ದಾರ್ ಕಛೇರಿಯಿಂದ ನನಗೆ ನೀಡಿರುವ ಹಿಂಬರಹ ನಿಪಿ-7 ಎಂದು ನಮ್ಮ ಕುಟುಂಬಕ್ಕೆ ಸಂಬಂಧಿಸಿದ ವಂಶ ವೃಕ್ಷ ನಿಪಿ-8 ಎಂದು ದಾವಾ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದ ಮ್ಯೂಟೇಷನ್ ರಿಜಿಸ್ಟರ್ ನಿಪಿ-9 ಎಂದು, ಋಣಭಾರ ರಾಹಿತ್ಯ ಪತ್ರ ನಿಪಿ-10 ಎಂದು ಗುರುತಿಸಲಾಗಿದೆ.

ಪಾಟೀ ಸವಾಲುಃ ಸಮಯಾವಕಾಶ ನೀಡಲಾಗಿದೆ.

(ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿದೆ,<br>ಓ ಹೇ ಕೇ ಸ ಇದೆ

(ಎನ್.ಬಿ. ಜಯಲಕ್ಷ್ಮಿ)<br>ಅಪರ ಸಿವಿಲ್ ನ್ಯಾಯಾಧೀಶರು ಮತ್ತು<br>ಪ್ರ.ದ.ನ್ಯಾ.ದಂ.ಕೊಳ್ಳೇಗಾಲ